ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಬೆಂಗಳೂರು

RAJIV GANDHI UNIVERSITY OF HEALTH SCIENCES, KARNATAKA, BENGALURU

4th T Block, Jayanagar, Bengaluru - 560 041

ಸಂಖ್ಯೆ. ಆರ್‌ಜಿಯು/ಪ್ರಾಧಿಕಾರ/170ನೇ ಸಿಂಡಿಕೇಟ್/38/2022–23 ದಿನಾಂಕ. 07.06.2022

ದಿನಾಂಕ 07.06.2022ರಂದು ಬೆಳಿಗ್ಗೆ 11.00 ಗಂಟೆಗೆ ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 170ನೇ ಸಿಂಡಿಕೇಟ್ ಸಭೆಯ ನಡವಳಿಗಳು :

**ಹಾಜರಿದ್ದ ಸದಸ್ಯರುಗಳು :**

| | | |
|---|---|---|
| 1. | ಡಾ॥ ಎಂ.ಕೆ. ರಮೇಶ್<br>ಕುಲಪತಿಗಳು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ | ಅಧ್ಯಕ್ಷರು |
| 2. | ಡಾ॥ ಕಟೀಲ್ ಸುರೇಶ್ ಕುಡ್ವಾ<br>ಅಧ್ಯಕ್ಷರು, ಭಾರತೀಯ ವೈದ್ಯ ಪರಿಷತ್ ಸಂಘ<br>ಕರ್ನಾಟಕ ರಾಜ್ಯ ಶಾಖೆ | ಪದನಿಮಿತ್ತ ಸದಸ್ಯರು |
| 3. | ಡಾ॥ ಕಂಚಿ ಪ್ರಹ್ಲಾದ್. ವಿ<br>ಅಧ್ಯಕ್ಷರು, ಕರ್ನಾಟಕ ವೈದ್ಯಕೀಯ ಪರಿಷತ್ | ಪದನಿಮಿತ್ತ ಸದಸ್ಯರು |
| 4. | ಡಾ॥ ಗಜಾನನ ಹೆಗಡೆ<br>ಡೀನ್ ಹಾಗೂ ನಿರ್ದೇಶಕರು<br>ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ, ಮೈಸೂರು | ಸದಸ್ಯರು |
| 5. | ಡಾ॥ ಮನೋಜ್ ಕುಮಾರ್ ಹೆಚ್.ವಿ<br>ಡೀನ್ ಹಾಗೂ ನಿರ್ದೇಶಕರು<br>ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ<br>ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ ಬೆಂಗಳೂರು | ಸದಸ್ಯರು |
| 6. | ಪ್ರೊ॥ ಎಸ್. ರಾಮಚಂದ್ರ ಶೆಟ್ಟಿ<br>ಪ್ರಾಂಶುಪಾಲರು, ಸರ್ಕಾರಿ ಫಾರ್ಮಸಿ ಕಾಲೇಜು, ಬೆಂಗಳೂರು | ಸದಸ್ಯರು |

ಕುಲಸಚಿವರು ಕುಲಪತಿಗಳು

| | | |
|---|---|---|
| 7. | ಡಾ॥ ಪಿ.ಎಸ್. ಭೂಸರಡ್ಡಿ<br>ನಿರ್ದೇಶಕರು (ಪ್ರ), ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು, ಅಂಗರಚನಾ ಶಾಸ್ತ್ರ ವಿಭಾಗ, ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ | ಸದಸ್ಯರು |
| 8. | ಡಾ॥ ನಾಗೇಶ್ ಎನ್.ಎಸ್<br>ನಿರ್ದೇಶಕರು, ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್, ಬೆಂಗಳೂರು | ಸದಸ್ಯರು |
| 9. | ಡಾ॥ ಎಮ್.ಆರ್.ರವಿಕುಮಾರ್<br>ಕಣ್ಣಿನ ತಜ್ಞರು, ಎಂ.ಎಂ.ಹಾಸ್ಪಿಟಲ್, ಕುಣಿಗಲ್ | ಸದಸ್ಯರು |
| 10. | ಡಾ॥ ಕೆ. ವೆಂಕಟಗಿರಿ<br>ಹಿಂದಿನ ಸೆನೆಟ್ ಸದಸ್ಯರು ರಾ.ಗಾ.ಆ.ವಿ.ವಿಶ್ವವಿದ್ಯಾಲಯ ಬೆಂಗಳೂರು | ಸದಸ್ಯರು |
| 11. | ಶ್ರೀ ಎಮ್. ಆರ್. ರವಿ ಕುಮಾರ್, ಭಾ.ಆ.ಸೇ<br>ಕುಲಸಚಿವರು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ | ಪದನಿಮಿತ್ತ ಕಾರ್ಯದರ್ಶಿಗಳು |

<u>ಸಭೆಗೆ ಗೈರು ಹಾಜರಾದವರು :</u>

| | | |
|---|---|---|
| 1. | ಪ್ರಧಾನ ಕಾರ್ಯದರ್ಶಿಗಳು<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |
| 2. | ಕಾರ್ಯದರ್ಶಿಗಳು<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>(ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |
| 3. | ನಿರ್ದೇಶಕರು<br>ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |
| 4. | ನಿರ್ದೇಶಕರು<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |

ಕುಲಸಚಿವರು                                        ಕುಲಪತಿಗಳು

| | | |
|---|---|---|
| 5. | ಆಯುಕ್ತರು<br>ಆಯುರ್ವೇದ, ಯೋಗ & ನ್ಯಾಚುರೋಪತಿ ಯುನಾನಿ, ಸಿದ್ದ & ಹೋಮಿಯೋಪತಿ (ಆಯುಷ್) ನಿರ್ದೇಶನಾಲಯ | ಪದನಿಮಿತ್ತ ಸದಸ್ಯರು |

ವಿಶ್ವವಿದ್ಯಾಲಯದ ಕುಲಸಚಿವರು ಗೌರವಾನ್ವಿತ ಕುಲಪತಿಗಳನ್ನು ಹಾಗೂ ಮಾನ್ಯ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು ಹಾಗೂ ಗೌರವಾನ್ವಿತ ಕುಲಪತಿಯವರಿಗೆ ಸಭೆಯ ಅಧ್ಯಕ್ಷತೆಯನ್ನು ವಹಿಸಿ ನಡವಳಿಗಳನ್ನು ನಡೆಸಲು ಕೋರಿದರು. ಗೌರವಾನ್ವಿತ ಕುಲಪತಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರುಗಳನ್ನು ವಿಶ್ವವಿದ್ಯಾಲಯದ 170ನೇ ಸಿಂಡಿಕೇಟ್ ಸಭೆಗೆ ಸ್ವಾಗತಿಸಿದರು. ತದನಂತರ ಕಾರ್ಯಸೂಚಿಯನ್ನು ಸಭೆಯ ಮುಂದೆ ಮಂಡಿಸಿದರು.

ಗೌರವಾನ್ವಿತ ಕುಲಪತಿಯವರು ವಿಶ್ವವಿದ್ಯಾಲಯದ ಶಾಸನಗಳ ಅಧ್ಯಾಯ (2)ರಲ್ಲಿ Statutes Governing Powers and Functions of the Syndicate ನ ಕುರಿತಾಗಿ ವಿವರಿಸುತ್ತಾ 2.10, 2.11, 2.13 ಮತ್ತು 2.14ರ ಪ್ರಕಾರ ಸಭೆಯಲ್ಲಿ ಚರ್ಚಿಸಲು ಗೌರವಾನ್ವಿತ ಸದಸ್ಯರುಗಳಿಗೆ ಸೂಚಿಸಿದರು. ಈ ರೀತಿಯಾಗಿ ಫಲಪ್ರದವಾದ ಚರ್ಚೆಯನ್ನು ಮಾಡಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸದಸ್ಯರುಗಳು ಇದಕ್ಕೆ ಸಹಮತವನ್ನು ವ್ಯಕ್ತಪಡಿಸಿದರು.

| | |
|---|---|
| 170/1 | ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ ಮತ್ತು ಶಾಸನ 1994ಗಳ ಪ್ರಕಾರ, **ಶಾಸನ 13** (Statutes Governing the condition Under Which Colleges may be affiliated to the University, University Notification Dated:24.10.1996-Pertaining to Affiliation of Colleges)ರ ಕಂಡಿಕೆ 13.3ರಲ್ಲಿ ಉಲ್ಲೇಖಿಸಿರುವಂತೆ, ವಿಶ್ವವಿದ್ಯಾಲಯದ ಸಿಂಡಿಕೇಟ್ ವತಿಯಿಂದ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ಮುಂದುವರೆದ ಸಂಯೋಜನೆ/ ಹೆಚ್ಚುವರಿ ಪ್ರವೇಶಾತಿ/ಹೆಚ್ಚುವರಿ ಪದವಿ/ನವೀಕರಣ ಒಪ್ಪಿಗೆ ಪತ್ರ/ವಿಳಾಸ ಬದಲಾವಣೆ/ ಹಾಗೂ ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡಲು, ಸ್ಥಳಿಯ ತಪಾಸಣಾ ಸಮಿತಿ ರಚಿಸಲು ಮತ್ತು ಹೊಸ ಕಾಲೇಜುಗಳಿಗೆ ಅರ್ಜಿ ಕರೆಯುವ ಕುರಿತಾಗಿ ಚರ್ಚಿಸಲು |
| **ಚರ್ಚೆ** | ಗೌರವಾನ್ವಿತ ಕುಲಪತಿಗಳು ಈ ಸಭೆಯನ್ನು ಕರೆದಿರುವ ಉದ್ದೇಶವನ್ನು ತಿಳಿಸುತ್ತಾ, ವಿಶ್ವವಿದ್ಯಾಲಯದ ಅಧಿನಿಯಮ ಮತ್ತು ಶಾಸನ 1994ಗಳ ಪ್ರಕಾರ, **ಶಾಸನ 13** |

ಕುಲಸಚಿವರು ಕುಲಪತಿಗಳು

(Statutes Governing the condition Under Which Colleges may be affiliated to the University, University Notification Dated:24.10.1996- Pertaining to Affiliation of Colleges )ರ ಕಂಡಿಕೆ 13.3ರಲ್ಲಿ ಉಲ್ಲೇಖಿಸಿರುವಂತೆ, ವಿಶ್ವವಿದ್ಯಾಲಯದ ಸಿಂಡಿಕೇಟ್ ವತಿಯಿಂದ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ಮುಂದುವರೆದ ಸಂಯೋಜನೆ/ಹೆಚ್ಚುವರಿ ಪ್ರವೇಶಾತಿ/ಹೆಚ್ಚುವರಿ ಪದವಿ/ನವೀಕರಣ ಒಪ್ಪಿಗೆ ಪತ್ರ/ವಿಳಾಸ ಬದಲಾವಣೆ/ ಹಾಗೂ ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡಲು, ಸ್ಥಳಿಯ ತಪಾಸಣಾ ಸಮಿತಿ ರಚಿಸಲು ಮತ್ತು ಹೊಸ ಕಾಲೇಜುಗಳಿಗೆ ಅರ್ಜಿ ಕರೆಯುವ ಕುರಿತಾಗಿ ಚರ್ಚಿಸಲು ಈ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಗೌರವಾನ್ವಿತ ಕುಲಪತಿಗಳು ಈ ಕುರಿತಾಗಿ ಮಾತನಾಡುತ್ತಾ ಕೋವಿಡ್ ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಈಗಾಗಲೇ ಸಂಯೋಜನೆ ಪ್ರಕ್ರಿಯೆಯಲ್ಲಿ ಸಾಕಷ್ಟು ವಿಳಂಭವಾಗಿದ್ದು ಆದಕಾರಣ ತುರ್ತಾಗಿ ಈ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು. ಈ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ಮುಂದುವರೆದ ಸಂಯೋಜನೆ/ಹೆಚ್ಚುವರಿ ಪ್ರವೇಶಾತಿ/ಹೆಚ್ಚುವರಿ ಪದವಿ/ನವೀಕರಣ ಒಪ್ಪಿಗೆ ಪತ್ರ/ವಿಳಾಸ ಬದಲಾವಣೆ/ ಹಾಗೂ ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡಲು ಸ್ಥಳೀಯ ತಪಾಸಣಾ ಸಮಿತಿಯನ್ನು ರಚಿಸಲು ವಿಶ್ವವಿದ್ಯಾಲಯದ ಅಧಿನಿಯಮ ಹಾಗೂ ಶಾಸನಗಳ ಪ್ರಕಾರ ಸೆನೆಟ್ ಸದಸ್ಯರುಗಳ ಹಾಗೂ ಅಕಾಡೆಮಿಕ್ ಕೌನ್ಸಿಲ್ ಸದಸ್ಯರುಗಳ ಹೆಸರುಗಳನ್ನು ಪಟ್ಟಿ ಮಾಡಿ (ಗೌರವಾನ್ವಿತ ಸೆನೆಟ್ ಸದಸ್ಯರುಗಳಾದ ನಾಮ ನಿರ್ದೇಶಿತ ವಿಧಾನ ಸಭೆಯ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು, ಪದನಿಮಿತ್ತ ಸದಸ್ಯರುಗಳು ಹಾಗೂ ಕೆಲವು ವೈದ್ಯಕೀಯ ಕಾಲೇಜುಗಳ ನಿರ್ದೇಶಕರುಗಳ ಹೆಸರುಗಳನ್ನು ಹೊರತುಪಡಿಸಿ) ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಭೌಗೋಳಿಕ ವಿಭಾಗಗಳನ್ನು ಪರಿಗಣನೆಗೆ ತೆಗೆದುಕೊಂಡು ಕನಿಷ್ಟ 5 ಕಾಲೇಜುಗಳ ಗುಂಪುಗಳನ್ನು ರಚಿಸಿ ಗಣಕಯಂತ್ರದ ಮೂಲಕ ರ್‍ಯಾಂಡಮ್ ಆಗಿ ಆಯ್ಕೆ ಮಾಡಿ ಸಮಿತಿಯನ್ನು ರಚಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಕುಲಸಚಿವರು　　　　　　　　　　ಕುಲಪತಿಗಳು

| | |
|---|---|
| | ಗೌರವಾನ್ವಿತ ಸದಸ್ಯರುಗಳು ಈ ಕುರಿತಾಗಿ ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳನ್ನು ಹೊರತುಪಡಿಸಿ ಉಳಿದ ನಿಖಾಯಗಳಿಗೆ ಸ್ಥಳೀಯ ತಪಾಸಣಾ ಸಮಿತಿಯನ್ನು ರಚಿಸಲು ಗಣಕಯಂತ್ರದ ಮೂಲಕ ಸೆನೆಟ್ ಹಾಗೂ ಅಕಾಡೆಮಿಕ್ ಕೌನ್ಸಿಲ್ ಸದಸ್ಯರುಗಳ ಪಟ್ಟಿಯನ್ನು ರಚಿಸಲು ಅನುಮೋದನೆ ನೀಡಿದರು ಹಾಗೂ ಸದರಿ ಸಮಿತಿಗೆ ವಿಷಯ ತಜ್ಞರನ್ನು ಸದಸ್ಯರನ್ನಾಗಿ ನೇಮಿಸುವಾಗ ಇದುವರೆಗೂ ಅವಕಾಶ ದೊರೆಯದಿರುವ ವಿಷಯ ತಜ್ಞರನ್ನು ಪರಿಗಣಿಸಬೇಕೆಂದು ಕೋರಿದರು. ಗೌರವಾನ್ವಿತ ಕುಲಪತಿಗಳು ಇದಕ್ಕೆ ಸಹಮತ ವ್ಯಕ್ತಪಡಿಸಿ ಗೌರವಾನ್ವಿತ ಸಿಂಡಿಕೇಟ್ ಸದಸ್ಯರುಗಳಿಗೆ ವಿಷಯ ತಜ್ಞರ ಪಟ್ಟಿಯನ್ನು ನೀಡಲು ತಿಳಿಸಿದರು ಹಾಗೂ ಸದರಿ ಪಟ್ಟಿಯನ್ನು ಕೂಡ ಗಣಕಯಂತ್ರದ ಮೂಲಕ ರ್‍ಯಾಂಡಮ್ ಆಗಿ ಸಮಿತಿಗಳಿಗೆ ನೇಮಿಸುವುದಾಗಿ ಸಭೆಯಲ್ಲಿ ತಿಳಿಸಿದರು.<br><br>ಗೌರವಾನ್ವಿತ ಕುಲಪತಿಗಳು ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡಲು ಅರ್ಜಿ ಕರೆಯುವ ಕುರಿತಾಗಿ ಚರ್ಚಿಸಿ ಸದಸ್ಯರುಗಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸೂಚಿಸಿದರು. ಗೌರವಾನ್ವಿತ ಸದಸ್ಯರುಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ಹೊಸದಾಗಿ ಕಾಲೇಜುಗಳಿಗೆ ಸಂಯೋಜನೆ ನೀಡಲು ಅಧಿಸೂಚನೆಯನ್ನು ಹೊರಡಿಸುವ ಮುನ್ನ ಸಂಬಂಧಪಟ್ಟ ನಿಕಾಯಗಳ ಅಪೆಕ್ಸ್ ಬಾಡಿಗಳು ಹೊರಡಿಸಿರುವ ಕನಿಷ್ಠ ಪ್ರಾಮಾಣಿತ ಅವಶ್ಯಕತೆಗಳನ್ನು ಅಭ್ಯಸಿಸಿ ಅದರಂತೆ ಕನಿಷ್ಠ ಪ್ರಾಮಾಣಿತ ಅವಶ್ಯಕತೆಗಳನ್ನು ಉತ್ತಮಪಡಿಸಿ ಅಳವಡಿಸಿಕೊಂಡು ಆ ಪ್ರಕಾರವಾಗಿ ಅಧಿಸೂಚನೆಯನ್ನು ಹೊರಡಿಸಿ ಅದರಂತೆ ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡಲು ಅರ್ಜಿ ಆಹ್ವಾನಿಸುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. |
| 170/1<br>ನಿರ್ಣಯ | ಸುದೀರ್ಘ ಚರ್ಚೆಯ ನಂತರ ಗೌರವಾನ್ವಿತ ಸದಸ್ಯರುಗಳ ಸರ್ವಾನುಮತದ ಒಪ್ಪಿಗೆಯಂತೆ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳನ್ನು ಹೊರತುಪಡಿಸಿ ಉಳಿದ ನಿಖಾಯಗಳಿಗೆ ಮುಂದುವರೆದ ಸಂಯೋಜನೆ/ಹೆಚ್ಚುವರಿ ಪ್ರವೇಶಾತಿ/ಹೆಚ್ಚುವರಿ ಪದವಿ/ನವೀಕರಣ ಒಪ್ಪಿಗೆ ಪತ್ರ/ವಿಳಾಸ ಬದಲಾವಣೆ/ ಹಾಗೂ ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡಲು ಗಣಕಯಂತ್ರದ ಮೂಲಕ ರ್‍ಯಾಂಡಮ್ ಆಗಿ ಸ್ಥಳೀಯ ತಪಾಸಣಾ ಸಮಿತಿಗೆ ಗೌರವಾನ್ವಿತ ಸೆನೆಟ್ ಹಾಗೂ |

ಕುಲಸಚಿವರು ಕುಲಪತಿಗಳು

| | |
|---|---|
| | ಅಕಾಡೆಮಿಕ್ ಕೌನ್ಸಿಲ್ ಸದಸ್ಯರುಗಳ ಹೆಸರುಗಳನ್ನು ನೇಮಿಸಿ ಪಟ್ಟಿಯನ್ನು ತಯಾರಿಸಲಾಯಿತು ಹಾಗೂ ಅವಶ್ಯಕತೆಗನುಗುಣವಾಗಿ ಕೆಲವು ಮಾರ್ಪಾಟುಗಳನ್ನು ಮಾಡಲು ಗೌರವಾನ್ವಿತ ಕುಲಪತಿಯವರಿಗೆ ಅಧಿಕಾರ ನೀಡಲು ತೀರ್ಮಾನಿಸಲಾಯಿತು ಮತ್ತು ಸಿಂಡಿಕೇಟ್ ಸದಸ್ಯರುಗಳಿಗೆ ವಿಷಯ ತಜ್ಞರ ಪಟ್ಟಿಯನ್ನು ನೀಡಲು ತಿಳಿಸಲಾಯಿತು ಹಾಗೂ ಸದರಿ ಪಟ್ಟಿಯನ್ನು ಕೂಡ ಗಣಕಯಂತ್ರದ ಮೂಲಕ ರ್‍ಯಾಂಡಮ್ ಆಗಿ ಸಮಿತಿಗಳಿಗೆ ನೇಮಿಸಲು ತೀರ್ಮಾನಿಸಲಾಯಿತು.<br><br>ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಿಗೆ ಸ್ಥಳೀಯ ತಪಾಸಣಾ ಸಮಿತಿಯನ್ನು ರಚಿಸಲು ಮತ್ತು ಹಲವು ಕಾರಣಗಳಿಂದ ಸ್ಥಳೀಯ ತಪಾಸಣಾ ಸಮಿತಿ ರಚನೆಯಾಗದೆ ಉಳಿಯುವ ಎಲ್ಲಾ ನಿಕಾಯಗಳ ಮುಂದುವರೆದ ಸಂಯೋಜನೆ/ಹೆಚ್ಚುವರಿ ಪ್ರವೇಶಾತಿ/ಹೆಚ್ಚುವರಿ ಪದವಿ/ನವೀಕರಣ ಒಪ್ಪಿಗೆ ಪತ್ರ/ವಿಳಾಸ ಬದಲಾವಣೆ/ ಹಾಗೂ ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡಲು ಸ್ಥಳೀಯ ತಪಾಸಣಾ ಸಮಿತಿ ರಚಿಸಲು ಗೌರವಾನ್ವಿತ ಕುಲಪತಿಗಳಿಗೆ ಅಧಿಕಾರ ನೀಡಲು ಸರ್ವಾನುಮತದಿಂದ ಸಭೆಯಲ್ಲಿ ಅನುಮೋದನೆ ನೀಡಲಾಯಿತು.<br><br>ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ಹೊಸದಾಗಿ ಕಾಲೇಜುಗಳಿಗೆ ಸಂಯೋಜನೆ ನೀಡಲು ಅಧಿಸೂಚನೆಯನ್ನು ಹೊರಡಿಸುವ ಮುನ್ನ ಸಂಬಂಧಪಟ್ಟ ನಿಕಾಯಗಳ ಅಪೆಕ್ಸ್ ಬಾಡಿಗಳು ಹೊರಡಿಸಿರುವ ಕನಿಷ್ಠ ಪ್ರಾಮಾಣಿತ ಅವಶ್ಯಕತೆಗಳನ್ನು ಅಭ್ಯಸಿಸಿ ಅದರಂತೆ ಕನಿಷ್ಠ ಪ್ರಾಮಾಣಿತ ಅವಶ್ಯಕತೆಗಳನ್ನು ಉತ್ತಮಪಡಿಸಿ ಅಳವಡಿಸಿಕೊಂಡು ಆ ಪ್ರಕಾರವಾಗಿ ಸೂಕ್ತ ಕ್ರಮ ಕೈಗೊಳ್ಳಲು ಗೌರವಾನ್ವಿತ ಕುಲಪತಿಗಳಿಗೆ ಅಧಿಕಾರ ನೀಡಲು ಸರ್ವಾನುಮತದಿಂದ ಸಭೆಯಲ್ಲಿ ಅನುಮೋದನೆ ನೀಡಲಾಯಿತು. |
| 170/2 | ರಾಮನಗರದ ಅರ್ಚಕರ ಹಳ್ಳಿಯಲ್ಲಿ ಆರ್‌ಜಿಯುಹೆಚ್‌ಎಸ್ ಕ್ಯಾಂಪಸ್ ನಿರ್ಮಾಣದ ಬಗ್ಗೆ ಸರ್ಕಾರದ ಪತ್ರ ಸಂಖ್ಯೆ ಆಕುಕ: 15:ಆರ್.ಜಿ.ಯು/2019, ದಿನಾಂಕ 06.04.2022ರ ಕುರಿತಾಗಿ ಚರ್ಚಿಸಲು. |

ಕುಲಸಚಿವರು

ಕುಲಪತಿಗಳು

| | |
|---|---|
| ಚರ್ಚೆ | ಗೌರವಾನ್ವಿತ ಕುಲಪತಿಗಳು ಆಕುಕ: 15: ಆರ್.ಜಿ.ಯು/2019, ದಿನಾಂಕ 06.04.2022ರ ಪತ್ರದಲ್ಲಿ ಸರ್ಕಾರವು ವಿಶ್ವವಿದ್ಯಾಲಯದ ಶಾಶ್ವತ ಕಟ್ಟಡವನ್ನು ರೂ. 600 ಕೋಟಿ ವೆಚ್ಚದಲ್ಲಿ ಮಾಡುವುದಾಗಿ 2022-23ರ ಆಯವ್ಯಯದಲ್ಲಿ ಘೋಷಿಸಲಾಗಿದೆ. ಆದುದರಿಂದ ಸದರಿ ರೂ. 600 ಕೋಟಿಗಳಷ್ಟು ಹಣವನ್ನು ಈ ಕಾಮಗಾರಿಗಾಗಿ ಮೀಸಲಿಡುವುದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರವು ಸದರಿ ಕಾಮಗಾರಿಗಾಗಿ ನೀಡಬಹುದಾದ ಅನುದಾನವನ್ನು ನಿರೀಕ್ಷಿಸಿ ಪ್ರಸ್ತುತ ವಿಶ್ವವಿದ್ಯಾಲಯದಲ್ಲಿರುವ ಸ್ಥಿರ ಠೇವಣಿ ಮೊತ್ತದಲ್ಲಿ ರೂ. 600 ಕೋಟಿಗಳನ್ನು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದ ವತಿಯಿಂದ ನಿರ್ಮಿಸಬಹುದಾದ ಶಾಶ್ವತವಾದ ಕ್ಯಾಂಪಸ್‌ನ ಕಟ್ಟಡ ನಿರ್ಮಿಸುವ ಸಲುವಾಗಿ ಕಟ್ಟಡ ಕಾಮಗಾರಿಗಾಗಿ "ಕಟ್ಟಡ ನಿಧಿ" ಎಂಬ ಶೀರ್ಷಿಕೆಯಲ್ಲಿ ಮೀಸಲಿಡಲು ಮತ್ತು 2022-23ನೇ ಸಾಲಿನ ಆಯವ್ಯಯದಲ್ಲಿ ಸೂಕ್ತ ಮಾರ್ಪಾಡಿನೊಂದಿಗೆ ಪರಿಷ್ಕೃತ ಆಯವ್ಯಯ ತಯಾರಿಸಬಹುದಾಗಿದೆ. ಆದುದರಿಂದ ಸದರಿ ವಿಷಯನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸಿದೆ ಎಂದು ತಿಳಿಸಿದರು. |
| 170/2<br>ನಿರ್ಣಯ | ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದಲ್ಲಿರುವ ಸ್ಥಿರ ಠೇವಣಿ ಮೊತ್ತದಲ್ಲಿ ರೂ. 600 ಕೋಟಿಗಳನ್ನು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದ ವತಿಯಿಂದ ನಿರ್ಮಿಸಬಹುದಾದ ಕಟ್ಟಡ ಕಾಮಗಾರಿಗಾಗಿ "ಕಟ್ಟಡ ನಿಧಿ" ಎಂಬ ಶೀರ್ಷಿಕೆಯಲ್ಲಿ ಮೀಸಲಿಡಲು ಮತ್ತು 2022-23ನೇ ಸಾಲಿನ ಆಯವ್ಯಯದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳಲು ಅನುಮೋದನೆ ನೀಡಲಾಯಿತು. |
| 170/3 | ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲ/ಭದ್ರತಾ ಸೇವೆ /ಸ್ವಚ್ಛತಾ ಸೇವೆ/ಮಿನಿಯಲ್ ವಿಶ್ವವಿದ್ಯಾಲಯದ ಆವರಣದಲ್ಲಿ ಉದ್ಯಾನವನದ ವಾರ್ಷಿಕ ನಿರ್ವಹಣೆಗಾಗಿ ಸೇವೆಯನ್ನು ಪಡೆಯುವ ಕುರಿತು. |
| ಚರ್ಚೆ | ಗೌರವಾನ್ವಿತ ಕುಲಪತಿಗಳು ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲ/ಭದ್ರತಾ ಸೇವೆ /ಸ್ವಚ್ಛತಾ ಸೇವೆ/ಮಿನಿಯಲ್ ವಿಶ್ವವಿದ್ಯಾಲಯದ ಆವರಣದಲ್ಲಿ ಉದ್ಯಾನವನದ ವಾರ್ಷಿಕ ನಿರ್ವಹಣೆಗಾಗಿ ಸೇವೆಯನ್ನು ಪಡೆಯುವ ಕುರಿತು ಸಭೆಯಲ್ಲಿ ಚರ್ಚಿಸಿದರು. |

ಕುಲಸಚಿವರು

ಕುಲಪತಿಗಳು

ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲ/ಭದ್ರತಾ ಸೇವೆ /ಸ್ವಚ್ಛತಾ ಸೇವೆ /ಮೀನಿಯಲ್ ಸಿಬ್ಬಂದಿಗಳ ಸೇವೆಗಾಗಿ ಹಾಗೂ ವಿಶ್ವವಿದ್ಯಾಲಯದ ಆವರಣದ ಉದ್ಯಾನವನದ ವಾರ್ಷಿಕ ನಿರ್ವಹಣೆಗಾಗಿ ಸೇವೆಯನ್ನು ಪಡೆಯುವುದಕ್ಕೆ ಸಂಬಂಧಿಸಿದ ವಿವರಗಳು ಈ ಕೆಳಕಂಡತೆ ಇರುತ್ತದೆ.

| ಕ್ರ. ಸಂ | 2022–23ನೇ ಸಾಲಿನ | ಟೆಂಡರ್‌ನ ಅಂದಾಜು ವೆಚ್ಚ |
|---|---|---|
| 01. | ಮಾನವ ಸಂಪನ್ಮೂಲ ಸೇವೆಗೆ | ರೂ.600.00 ಲಕ್ಷ |
| 02 | ಭದ್ರತಾ ಸೇವೆ ಮತ್ತು ಸ್ವಚ್ಛತಾ ಸೇವೆ /ಮಿನಿಯಲ್ ಸಿಬ್ಬಂದಿ | ರೂ.240.00 ಲಕ್ಷ |
| 03. | ಉದ್ಯಾನವನದ ವಾರ್ಷಿಕ ನಿರ್ವಹಣೆಗಾಗಿ | ರೂ.5.00 ಲಕ್ಷ |
| | ಒಟ್ಟು ವೆಚ್ಚ | ರೂ.845–00 ಲಕ್ಷ |

ಮೇಲ್ಕಂಡ ಸದರಿ ಸೇವೆಗಳ ಸಂಬಂಧಿಸಿದಂತೆ ಕೆಟಿಟಿಪಿ ನಿಯಾಮಾವಳಿಗಳ ಅನ್ವಯ ಇ– ಪ್ರೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ವಿಶ್ವವಿದ್ಯಾಲಯದ 2022–23ನೇ ಸಾಲಿನಲ್ಲಿ ಆಯವ್ಯಯದಲ್ಲಿ ಸದರಿ ಸೇವೆಗಳಿಗಾಗಿ ಹಣ ಹಂಚಿಕೆ ಮಾಡಲಾಗಿರುತ್ತದೆ. ಸದರಿ ವೆಚ್ಚಗಳ ಬಗ್ಗೆ ಆಡಳಿತಾತ್ಮಕ ಅನುಮೋದನೆಗಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದೆ ಎಂದು ತಿಳಿಸಿದರು.

**170/3**

**ನಿರ್ಣಯ**

ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲ/ಭದ್ರತಾ ಸೇವೆ/ ಸ್ವಚ್ಛತಾ ಸೇವೆ/ಮಿನಿಯಲ್ ವಿಶ್ವವಿದ್ಯಾಲಯದ ಆವರಣದಲ್ಲಿ ಉದ್ಯಾನವನದ ವಾರ್ಷಿಕ ನಿರ್ವಹಣೆಗಾಗಿ ಸೇವೆಯನ್ನು ಪಡೆಯುವ ಕುರಿತಾಗಿ ಟೆಂಡರ್‌ನ ಅಂದಾಜು ವೆಚ್ಚ ಒಟ್ಟು ರೂ.845–00 ಲಕ್ಷಗಳು ಹಾಗೂ ವಿಶ್ವವಿದ್ಯಾಲಯದ 2022–23ನೇ ಸಾಲಿನಲ್ಲಿ ಆಯವ್ಯಯದಲ್ಲಿ ಸದರಿ ಸೇವೆಗಳಿಗಾಗಿ ಹಣ ಹಂಚಿಕೆ ಮಾಡಿರುವ ಕುರಿತಾಗಿ ಸದರಿ ವೆಚ್ಚಗಳ ಬಗ್ಗೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ಮುಂದುವರೆದು ನೂತನ ಟೆಂಡರ್ ಅಂತಿಮಗೊಳ್ಳುವವರೆಗೂ ಹಾಲಿ ಇರುವ ಉದ್ಯಾನವನದ ವಾರ್ಷಿಕ ನಿರ್ವಹಣೆ ಗುತ್ತಿಗೆ ಟೆಂಡರ್ ಪ್ರಕ್ರಿಯೆಯನ್ನು ಮುಂದುವರೆಸಲು ಅನುಮೋದನೆ ನೀಡಲಾಯಿತು.

ಕುಲಸಚಿವರು

ಕುಲಪತಿಗಳು

| | |
|---|---|
| 170/4 | ಗೌರವಾನ್ವಿತ ಅಧ್ಯಕ್ಷರ ಮೇರೆಗೆ ಇತರೆ ವಿಷಯಗಳು. |
| 1) | ಮಾನ್ಯ ಕುಲಸಚಿವರು ಕೆಲವು ಸದಸ್ಯರುಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಕುರಿತಾಗಿ ಚರ್ಚಿಸುತ್ತಾ ವಿಶ್ವವಿದ್ಯಾಲಯದ ವತಿಯಿಂದ ಮುಂದುವರೆದ ಸಂಯೋಜನೆ ಇಲ್ಲದೆ ಹಾಗೂ ಸಂಬಂಧಪಟ್ಟ ಅಪೆಕ್ಸ್ ಬಾಡಿಗಳಿಂದ ಸಂಯೋಜನೆ ದೊರಕದೆ ಹಲವು ಕಾಲೇಜುಗಳು ಉಚ್ಛನ್ಯಾಯಾಲಯದ ಆದೇಶದ ಮೇರೆಗೆ ವಿದ್ಯಾರ್ಥಿಗಳ ಪ್ರವೇಶಾತಿ ಪಡೆದು ತರಗತಿಗಳನ್ನು ನಡೆಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿ ಈ ತರಹದ ವಿಷಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ವಿಶ್ವವಿದ್ಯಾಲಯದ ಮಟ್ಟದಲ್ಲಿ ಅಗತ್ಯ ಕ್ರಮವನ್ನು ಜರುಗಿಸಲು ಸಭೆಯನ್ನು ಆಯೋಜಿಸಿ ಸಮಗ್ರವಾಗಿ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುವ ಅವಶ್ಯಕತೆಯಿದೆ ಎಂದು ಸಭೆಯಲ್ಲಿ ಅಭಿಪ್ರಾಯ ಮಂಡಿಸಿದರು.<br><br>ಗೌರವಾನ್ವಿತ ಸದಸ್ಯರುಗಳು ಇಂಡಿಯನ್ ನರ್ಸಿಂಗ್ ಕೌನ್ಸಿಲ್‌ರ ಪತ್ರದಲ್ಲಿ ಉಲ್ಲೇಖಿಸಿರುವಂತೆ ಬಿ.ಎಸ್‌ಸಿ ನರ್ಸಿಂಗ್ ಕೋರ್ಸಿಗೆ ಪ್ರವೇಶಾತಿ ಪಡೆಯಲು ಪ್ರವೇಶ ಪರೀಕ್ಷೆ ಆಯೋಜಿಸುವ ಕುರಿತಾಗಿ ಸಭೆಯಲ್ಲಿ ಚರ್ಚಿಸಿದರು. ಅದರಂತೆ ಸುದೀರ್ಘ ಚರ್ಚೆಯ ನಂತರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಯೋಜಿತ ನರ್ಸಿಂಗ್ ಕಾಲೇಜುಗಳಲ್ಲಿ ಬಿ.ಎಸ್‌ಸಿ ನರ್ಸಿಂಗ್ ಕೋರ್ಸಿಗೆ ಪ್ರವೇಶಾತಿ ಪಡೆಯಲು ಪ್ರವೇಶ ಪರೀಕ್ಷೆ ಆಯೋಜಿಸುವ ಕುರಿತಾಗಿ ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು.<br><br>ಗೌರವಾನ್ವಿತ ಸದಸ್ಯರುಗಳ ಅಭಿಪ್ರಾಯದಂತೆ ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಅಕಾಡೆಮಿಕ್ ಕೌನ್ಸಿಲ್ ಸದಸ್ಯರುಗಳಿಗೆ ಕಾಲೇಜುಗಳಿಗೆ ಸ್ಥಳೀಯ ತಪಾಸಣಾ ಸಮಿತಿಯಾಗಿ ತೆರಳಿದಾಗ ಅನುಸರಿಸಬೇಕಾದ ಮತ್ತು ಪಾಲಿಸಬೇಕಾದ ನಿಯಮಗಳ ಕುರಿತಾಗಿ ತರಬೇತಿ ನೀಡಲು ಓರಿಯಂಟೇಷನ್ ಸಭೆಯನ್ನು ಆಯೋಜಿಸಲು ತೀರ್ಮಾನಿಸಲಾಯಿತು.<br><br>ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಬಗ್ಗೆ ಚರ್ಚಿಸುತ್ತಾ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರರಿಗೆ ವೃಂದ ಮತ್ತು ನೇಮಕಾತಿ |

ಕುಲಸಚಿವರು ಕುಲಪತಿಗಳು

ನಿಯಮಾವಳಿಗಳ ಪ್ರಕಾರ ಬಡ್ತಿ ನೀಡಲು ಮತ್ತು ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ತಾತ್ವಿಕ ಒಪ್ಪಿಗೆ ನೀಡಲಾಯಿತು. ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಾಲಿ ಗ್ರೂಪ್ ಡಿ, ವಾಹನ ಚಾಲಕರು, ಕಿರಿಯ ಸಹಾಯಕರು ಇವರಿಗೆ ಪ್ರಸ್ತುತವಾಗಿ ನೀಡುತ್ತಿರುವ ವೇತನವನ್ನು ಶೇಕಡ 10ರಷ್ಟು ಹೆಚ್ಚಿಸಲು ಅನುಮೋದನೆ ನೀಡಲಾಯಿತು.

ಮಾನ್ಯ ಕುಲಸಚಿವರು ಗೌರವಾನ್ವಿತ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರ ಟಿಪ್ಪಣಿಯಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪ್ರವೇಶಾತಿ ಪಡೆಯಲು ಅನುಕೂಲವಾಗುವಂತೆ ವಿಶ್ವವಿದ್ಯಾಲಯದ ವತಿಯಿಂದ ಪಿಜಿ ನೀಟ್ ತರಬೇತಿ ನೀಡಲು ಸೂಚಿಸಿರುತ್ತಾರೆಂದು ತಿಳಿಸಿದರು. ಅದರಂತೆ ಸಭೆಯಲ್ಲಿ ಗೌರವಾನ್ವಿತ ಕುಲಪತಿಯವರಿಗೆ ಈ ಕುರಿತಾಗಿ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರ ನೀಡಲು ತೀರ್ಮಾನಿಸಲಾಯಿತು.

ಗೌರವಾನ್ವಿತ ಸದಸ್ಯರುಗಳು Formulation of Ordinance Governing Central Assessment Programme (CAP) for theory paper assessment of all Under Graduate courses in all faculty examinations affiliated to RGUHS ಕುರಿತಾಗಿ ಚರ್ಚಿಸಿದರು ಮತ್ತು ಈಗಾಗಲೇ ಈ ಕುರಿತಾಗಿ ಅಕಾಡೆಮಿಕ್ ಕೌನ್ಸಿಲ್, ಸಿಂಡಿಕೇಟ್ ಮತ್ತು ಸೆನೆಟ್ ಸಭೆಯಲ್ಲಿ ಚರ್ಚಿಸಲಾಗಿದ್ದು ಸದರಿ ವಿಷಯವು ಯಾವ ಹಂತದಲ್ಲಿದೆ ಎಂದು ವಿಚಾರಿಸಿದರು. ಗೌರವಾನ್ವಿತ ಕುಲಪತಿಗಳು ಈ ಕುರಿತಾಗಿ ವಿವರಿಸುತ್ತಾ ಸದರಿ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಶೀಘ್ರದಲ್ಲಿಯೇ ತೀರ್ಮಾನಿಸುವುದಾಗಿ ತಿಳಿಸಿದರು.

ಗೌರವಾನ್ವಿತ ಕುಲಪತಿಗಳು ವಿಶ್ವವಿದ್ಯಾಲಯದ ಕುಲಪತಿಗಳಿಗೆ ವಸತಿ ಗೃಹ ಮತ್ತು ವಿಶ್ವವಿದ್ಯಾಲಯದ ಅತಿಥಿ ಗೃಹ ನಿರ್ಮಿಸುವ ಅವಶ್ಯಕತೆಯಿದೆ ಎಂದು ಸಭೆಯಲ್ಲಿ ತಿಳಿಸಿದರು. ಗೌರವಾನ್ವಿತ ಸದಸ್ಯರು ಇದಕ್ಕಾಗಿ ಸೂಕ್ತ ನಿವೇಶನ ಅಥವಾ ಕಟ್ಟಡವನ್ನು ಗುರುತಿಸಿ ಖರೀದಿಸಲು ಗೌರವಾನ್ವಿತ ಕುಲಪತಿಗಳಿಗೆ ಮತ್ತು ಮಾನ್ಯ ಕುಲಸಚಿವರಿಗೆ ಅಧಿಕಾರ ನೀಡಲು ಸರ್ವಾನುಮತದಿಂದ

ಕುಲಸಚಿವರು ಕುಲಪತಿಗಳು

ತೀರ್ಮಾನಿಸಿದರು ಹಾಗೂ ವಿಶ್ವವಿದ್ಯಾಲಯದ ಕುಲಪತಿಗಳಿಗೆ ವಸತಿ ಗೃಹ ಮತ್ತು ವಿಶ್ವವಿದ್ಯಾಲಯದ ಅತಿಥಿ ಗೃಹ ನಿರ್ಮಿಸಲು ನಿವೇಶನ ಅಥವಾ ಕಟ್ಟಡವನ್ನು ಖರೀದಿಸುವ ಪ್ರಕ್ರಿಯೆ ಪೂರ್ಣಗೊಳ್ಳುವವರೆಗು ವಿಶ್ವವಿದ್ಯಾಲಯದ ಕುಲಪತಿಗಳಿಗೆ ವಸತಿ ಗೃಹ ಮತ್ತು ವಿಶ್ವವಿದ್ಯಾಲಯದ ಅತಿಥಿ ಗೃಹ ಸಲುವಾಗಿ ಕಟ್ಟಡವನ್ನು ಒಪ್ಪಂದದ ಕರಾರು/ಬಾಡಿಗೆ ಮೇರೆಗೆ ಪಡೆಯಲು ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಿಗೆ ಮತ್ತು ಕುಲಸಚಿವರಿಗೆ ಅಧಿಕಾರ ನೀಡಲು ತೀರ್ಮಾನಿಸಲಾಯಿತು.

ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವ ಶಿಕ್ಷಕರುಗಳಿಗೆ ಸಂಭಾವನೆ ಪಾವತಿ ಮಾಡುವಲ್ಲಿ ವಿಳಂಬವಾಗುತ್ತಿರುವ ಕುರಿತಾಗಿ ಚರ್ಚಿಸಲಾಯಿತು. ಅದರಂತೆ ಪರೀಕ್ಷಾ ಕಾರ್ಯಗಳಿಗೆ ಸದರಿ ಕಾಲೇಜುಗಳ ಪ್ರಾಂಶುಪಾಲರು ಸಲ್ಲಿಸುವ ವೆಚ್ಚಗಳ ಪಟ್ಟಿಗಳಿಗನುಗುಣವಾಗಿ ಮುಂಗಡವಾಗಿ ಹಣ ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು ಹಾಗೂ ಸದರಿ ಕಾಲೇಜುಗಳ ಪ್ರಾಂಶುಪಾಲರು ಹಣ ಬಿಡುಗಡೆಯಾದ ಮೂವತ್ತು ದಿನಗಳೊಳಗಾಗಿ ವೆಚ್ಚಗಳ ಕುರಿತಾಗಿ ಲೆಕ್ಕಪತ್ರ ಸಲ್ಲಿಸಲು ಸೂಚಿಸಲು ತೀರ್ಮಾನಿಸಲಾಯಿತು. ತಪ್ಪಿದ್ದಲ್ಲಿ ಅಂತಹ ಕಾಲೇಜುಗಳ ಪ್ರಾಂಶುಪಾಲರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು ಹಾಗೂ ಮುಂದಿನ ಹಂತದಲ್ಲಿ ಪರೀಕ್ಷಾ ಕೇಂದ್ರ ನೀಡದಿರಲು ತೀರ್ಮಾನಿಸಲಾಯಿತು.

ಗೌರವಾನ್ವಿತ ಕುಲಪತಿಗಳು, ಯುವಕ ಸಂಘ, ಜಯನಗರ, ಬೆಂಗಳೂರು ಇವರು ಒಂದು ಲಾಭರಹಿತ ಸಂಸ್ಥೆಯಾಗಿದ್ದು, ನ್ಯಾಷನಲ್ ಯೂತ್ ಅಡ್ವೈಸರಿ ಕಮಿಟಿ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ಭಾರತ ಸರ್ಕಾರ ಇದರ ಸದಸ್ಯ ಸಂಸ್ಥೆಯಾಗಿರುತ್ತದೆ. ಈ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸಲ್ಲಿಸಿರುವ ಮನವಿ ಪತ್ರದಲ್ಲಿ ಉಲ್ಲೇಖಿಸಿರುವಂತೆ 'ಸ್ಕೂಲ್ ಬೆಲ್' ಅಭಿಯಾನದ ಅಡಿಯಲ್ಲಿ 75 ಸರ್ಕಾರಿ ಶಾಲೆಗಳನ್ನು ಉನ್ನತೀಕರಣಗೊಳಿಸಲು (rejuvenation) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ರೂ. 69,37,500/-ಗಳ ಆರ್ಥಿಕ ಸಹಾಯವನ್ನು ಕೋರಿರುತ್ತಾರೆ ಆದ್ದರಿಂದ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಗಮನಕ್ಕಾಗಿ ಸಲ್ಲಿಸಿದೆ ಎಂದು ತಿಳಿಸಿದರು.

ಕುಲಸಚಿವರು ಕುಲಪತಿಗಳು

| | |
|---|---|
| | ಸುದೀರ್ಘ ಚರ್ಚೆಯ ನಂತರ, ಯುವಕ ಸಂಘ, ಜಯನಗರ, ಬೆಂಗಳೂರು ಇವರಿಗೆ 'ಸ್ಕೂಲ್ ಬೆಲ್' ಅಭಿಯಾನದ ಅಡಿಯಲ್ಲಿ 25 ಸರ್ಕಾರಿ ಶಾಲೆಗಳನ್ನು ಉನ್ನತೀಕರಣಗೊಳಿಸಲು (rejuvenation) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ರೂ. 23,12,500/-ಗಳ ಆರ್ಥಿಕ ಸಹಾಯವನ್ನು ವಿಶ್ವವಿದ್ಯಾಲಯದ ನಿಯಮಾವಳಿಗನ್ನು ಪಾಲಿಸಿ ಬಿಡುಗಡೆ ಮಾಡಲು ಅನುಮೋದನೆ ನೀಡಲಾಯಿತು. |

ಸಭೆಯಲ್ಲಿ ಮೇಲ್ಕಂಡ ವಿಷಯವನ್ನು ಸಮಗ್ರವಾಗಿ ಚರ್ಚಿಸಿ ತೀರ್ಮಾನವನ್ನು ತೆಗೆದುಕೊಂಡ ನಂತರ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು

ಕುಲಪತಿಗಳು

ಗೆ

ಸಿಂಡಿಕೇಟ್ ಸದಸ್ಯರುಗಳು/ ಪದನಿಮಿತ್ತ ಸದಸ್ಯರು.

<u>ಪ್ರತಿಗಳು : -</u>

1. ಘನತೆವೆತ್ತ ರಾಜ್ಯಪಾಲರ ಆಪ್ತ ಕಾರ್ಯದರ್ಶಿಗಳು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು
2. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ವಿಧಾನಸೌಧ, ಬೆಂಗಳೂರು
3. ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಆಪ್ತ ಸಹಾಯಕರುಗಳು, ಕುಲಪತಿಗಳು/ ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ/ ಹಣಕಾಸು ಅಧಿಕಾರಿಗಳು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ, ಬೆಂಗಳೂರು.
6. ಕಛೇರಿ ಪ್ರತಿ.

ಕುಲಸಚಿವರು

ಕುಲಪತಿಗಳು